**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ</u>**

**ಸಿಸಿ.ನಂ.98/2024**

| | | |
|---|---|---|
| ಸಾಕ್ಷಿಯ ಹೆಸರು | ರವಿ | |
| ತಂದೆಯ ಹೆಸರು | ಲೇಟ್ ಹುಚ್ಚೇಗೌಡ | |
| ವಯಸ್ಸು | 43 ವರ್ಷ | |
| ಉದ್ಯೋಗ | ಗಾರೆ ಕೆಲಸ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಜಟ್ಟಿಹುಂಡಿ ಗ್ರಾಮ,<br>ಮೈಸೂರು ತಾಃ | |

ದಿನಾಂಕಃ **25-11-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ</u>**

1) ನನಗೆ ದೂರುದಾರರು ಪರಿಚಯ ಇರುವುದಿಲ್ಲ. ನಾನು ದೂರುದಾರರ ಬಳಿ ಸಾಲವಾಗಿ ಹಣವನ್ನು ಪಡೆದುಕೊಂಡಿರುವುದಿಲ್ಲ. ದೂರುದಾರರ ತಂದೆ ನನಗೆ 10-15 ವರ್ಷಗಳಿಂದ ಪರಿಚಯ ಇದ್ದರು. ನಾನು ದೂರುದಾರರ ತಂದೆಗೆ ಸೇರಿದ ಮನೆ ನಿರ್ಮಾಣ ಮಾಡಲು ಗಾರೆ ಕೆಲಸ ಮಾಡುತ್ತಿದ್ದೆನು. ನಾನು ದೂರುದಾರರ ತಂದೆಯ ಬಳಿ ಒಂದು ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡು, ಸಾಲದ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ನೀಡಿರುತ್ತೇನೆ. ನಾನು ಸಾಲವಾಗಿ ಪಡೆದುಕೊಂಡಿರುವ ಒಂದು ಲಕ್ಷ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿರುತ್ತೇನೆ. ನಾನು ಹಣವನ್ನು ಮರುಪಾವತಿ ಮಾಡಿದ ನಂತರ ನಾನು ಮತ್ತು ದೂರುದಾರರ ತಂದೆ ಚೆನ್ನಾಗಿರುವ ಕಾರಣ ಚೆಕ್ಕನ್ನು ವಾಪಸ್ಸು ಪಡೆದುಕೊಂಡಿರುವುದಿಲ್ಲ. ನಂತರ ದೂರುದಾರರ ತಂದೆ ತೀರಿಕೊಂಡಿರುತ್ತಾರೆ. ದೂರುದಾರರ ತಂದೆ ತೀರಿಕೊಂಡ ನಂತರ ದೂರುದಾರ ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆದ್ದರಿಂದ ಪ್ರಕರಣದಿಂದ ಬಿಡುಗಡೆ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಪ್ರದನ್ಯಾದಂ., ಕೆ.ಆರ್.ನಗರ.**